ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**C**

**ಸಂಕೇತ ಸಂಖ್ಯೆ : 62-K**
**Code No. : 62-K**

**CCE PF**
**CCE PR**
**NSR & NSPR**

Question Paper Serial No. **302**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

ದಿನಾಂಕ : 08. 04. 2022 ] [ Date : 08. 04. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : **10 × 1 = 10**

1. ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರದಿಂದ ಕೂಡಿರುವ ಪದ

   (ಎ) ಅಕ್ಷರ

   (ಬಿ) ಪುಸ್ತಕ

   (ಸಿ) ಅಕ್ಕ

   (ಡಿ) ಶಸ್ತ್ರ

2. ಕೆಳಗಿನವುಗಳಲ್ಲಿ ಗುಣ ಸಂಧಿಗೆ ಉದಾಹರಣೆ

   (ಎ) ಮಹಾತ್ಮ

   (ಬಿ) ನವೋದಯ

   (ಸಿ) ಜಾತ್ಯತೀತ

   (ಡಿ) ಪರಿಜ್ಞಾನವನ್ನು

3. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ

   (ಎ) ಉದ್ಧರಣ ಚಿಹ್ನೆ

   (ಬಿ) ಆವರಣ ಚಿಹ್ನೆ

   (ಸಿ) ಅರ್ಧವಿರಾಮ

   (ಡಿ) ಅಲ್ಪವಿರಾಮ

4. 'ಪದುಮ' – ಇದರ ತತ್ಸಮ ರೂಪ

(ಎ) ಪದ

(ಬಿ) ಪಮ್ಮ

(ಸಿ) ಪದ್ಮ

(ಡಿ) ದಮ್ಮ

5. ಇವುಗಳಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಪದ

(ಎ) ಭೂಮಿ

(ಬಿ) ಕಚೇರಿ

(ಸಿ) ಮೇಜು

(ಡಿ) ಪೊಲೀಸ್

6. 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ದ್ವಿಗು ಸಮಾಸ

(ಬಿ) ಅಂಶಿ ಸಮಾಸ

(ಸಿ) ಕ್ರಿಯಾ ಸಮಾಸ

(ಡಿ) ದ್ವಂದ್ವ ಸಮಾಸ

7. 'ಅಂತರಂಗ' – ಇದರ ವಿರುದ್ಧಾರ್ಥಕ ಪದ

(ಎ) ಬಹಿರಂಗ

(ಬಿ) ತರಂಗ

(ಸಿ) ರಂಗ

(ಡಿ) ನಿರಂತರಂಗ

8. 'ಗೌರಮ್ಮನವರು ಮಡಿಕೇರಿಯ ಸುಂದರ ವಾತಾವರಣದಲ್ಲಿ ಬೆಳೆದರು' – ಇಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯ ಇರುವ ಪದ

(ಎ) ಗೌರಮ್ಮನವರು

(ಬಿ) ಮಡಿಕೇರಿಯ

(ಸಿ) ವಾತಾವರಣದಲ್ಲಿ

(ಡಿ) ಬೆಳೆದರು

9. 'ಹುಡುಗಿ' ಇದರ ಬಹುವಚನ ರೂಪ

(ಎ) ಹುಡುಗಿಯು

(ಬಿ) ಹುಡುಗಿಯಂದಿರು

(ಸಿ) ಬಾಲಕಿಯರು

(ಡಿ) ಹುಡುಗಿಯರು

10. ಇವುಗಳಲ್ಲಿ ಪ್ರಶ್ನಾರ್ಥಕ ಸರ್ವನಾಮ

(ಎ) ನಾನು

(ಬಿ) ಏನು

(ಸಿ) ನೀನು

(ಡಿ) ತಾನು

**II. ಕೆಳಗಿನವುಗಳಲ್ಲಿ ಮೊದಲರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 5 × 1 = 5**

11. ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ........................ .

12. ಡಿ.ಎಸ್.ಪಿ. : ಬ್ರಿಟಿಷ್ ಪೊಲೀಸ್ ಅಧಿಕಾರಿ :: ಕುಲಕರ್ಣಿ : ........................ .

13. ಸ್ವರ್ಗ : ಆಚಾರ :: ನರಕ : ........................ .

14. ಕರದಲಿ : ಜಪಮಣಿ :: ಬಾಯಲಿ : ........................ .

15. ಶರೀಫರ ತಂದೆ : ಹಜರತ ಇಮಾಮ :: ಶರೀಫರ ತಾಯಿ : ........................ .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ : 5 × 1 = 5**

16. ಕೊಡಗಿನ ಗೌರಮ್ಮನವರು ಅಕಾಲಿಕ ಮರಣ ಹೊಂದಿದ್ದು ಹೇಗೆ ?

17. 'ಉದರ ವೈರಾಗ್ಯ' ಎಂದರೇನು ?

18. ಯೋಗಿಯಾದವನು ಏನನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ ?

19. ಪುಲಿಗೆರೆ ಸೋಮನಾಥನ ಅಂಕಿತನಾಮ ಯಾವುದು ?

20. ಮೋಹನಪುರದಲ್ಲಿ ನಡೆದ ಚಳುವಳಿ ಯಾವುದು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

21. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?

22. ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು ?

23. "ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಹೇಳಿದ ಸನ್ನಿವೇಶವನ್ನು ವಿವರಿಸಿ.

24. ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು ?

25. ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟವು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ ?

26. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳನ್ನು ಸಮರ್ಥಿಸಿ.

27. ದನಕರುಗಳು ಹೇಗಾಗಿವೆ ಎಂದು ರೈತನು ಮಳೆರಾಯನಲ್ಲಿ ನಿವೇದಿಸುತ್ತಾನೆ ?

28. ವಿಶು ಜ್ಞಾನತಪ್ಪಿ ಏಕೆ ಕೆಳಗುರುಳಿದನು ?

29. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳಾವುವು ?

30. ಯಾವ ಯಾವ ಸಾಮರ್ಥ್ಯದಿಂದ ಯಾವ ಯಾವ ಕಾರ್ಯಗಳನ್ನು ಮಾಡಬೇಕೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 4 × 3 = 12**

31. "ಸಾಕು ಮಾಡಿರಿ ನಿಮ್ಮ ಪುರಾಣ."

32. "ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ."

33. "ಈಗ ನೀವು ನನ್ನ ವಶವಾದಿರಿ, ನಾನು ನಿಮ್ಮನ್ನು ಕೈ ಬಿಡುವಂತಿಲ್ಲ."

34. "ಸ್ವಸ್ವಭಾವ ಚಹರೆ ಬೇರೆ ತಾಯ ಬಸಿರು ಒಂದೆ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

35. ಮಿನಿ ಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಗೊರೂರರು ಪಾರಾದುದು ಹೇಗೆ ?

36. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿ.

37. ಯಾವುದೇ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣದ ಆಶಯವು ಸತೀಶ ಕುಲಕರ್ಣಿಯವರ ಕವಿತೆಯಲ್ಲಿ ಹೇಗೆ ಅಂತರ್ಗತವಾಗಿದೆ ? ವಿವರಿಸಿ.

38. 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

39. ಆರ್.ಎಸ್. ಸುಂಕದ

40. ಪ್ರೊ. ಕೆ.ಎಸ್. ನಿಸಾರ್ ಅಹಮದ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ *ಒಂದನ್ನು* ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

41. ಶಕ್ತಿಗಿಂತ ಯುಕ್ತಿ ಮೇಲು.

***ಅಥವಾ***

ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

**IX. ಕೆಳಗಿನ ಒಂದು ಪ್ರಶ್ನೆಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

42. ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದುದು ಹೇಗೆ ? ವಿವರಿಸಿ.

***ಅಥವಾ***

ಶಿವಾಜಿಯು ಮಲ್ಲಮ್ಮಾಜಿಯವರೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

43. ಕಳಬೇಡ, ಕೊಲಬೇಡ, ........................................

..................................................................

..................................................................

..................................................................

........................................ ದೇವರನೊಲಿಸುವ ಪರಿ.

***ಅಥವಾ***

ದೇವಲೋಕ, ಮರ್ತ್ಯಲೋಕ ...................................

..................................................................

..................................................................

............................................... ನೀವೇ ಪ್ರಮಾಣು.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

44. ಗೋಳಿಲ್ಲದ ಗುಂಡಿಲ್ಲದ
ನಾಡ ಕಟ್ಟತೇವ
ನೂರು ಮನಸಿನ
ಕೋಟಿ ಕನಸಿನ
ಹಾಡ ಕಟ್ಟತೇವ ನಾವು ನಾಡ ಕಟ್ಟುತೇವ ॥

**XII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **5 × 1 = 5**

'ನಗು' ಎಂಬುದು ಮಾನವನ ಸಹಜವಾದ ಧರ್ಮ. ನಗೆಯನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು – ಮೆಚ್ಚುನಗೆ ಮತ್ತು ಚುಚ್ಚುನಗೆ. ಬುದ್ಧನ ಮುಗುಳುನಗೆ, ಶ್ರೀಕೃಷ್ಣನ ಸರಸನಗೆ, ಪಂಪ ಕವಿಯ ರಸನಗೆಗಳಲ್ಲಿ ಮಾಧುರ್ಯವಿದೆ. ಅದನ್ನು ಜನತೆ ಮೆಚ್ಚುತ್ತದೆ. ಎಲ್ಲರೂ ಮೆಚ್ಚುವ

ನಗೆಯೇ ಮೆಚ್ಚುನಗೆ. ಅನ್ಯರ ಮನಕ್ಕೆ ನೋವಾಗುವಂತೆ ನಗುವುದು ಚುಚ್ಚುನಗೆ. ನಯಸೇನನ ಮೂದಲಿಕೆ, ತೆನಾಲಿರಾಮನ ಕುಚೇಷ್ಟೆಯ ನಗೆಗಳಲ್ಲಿ ಒರಟುತನ ಹೆಚ್ಚು. ಮುಗ್ಧನಗೆಯಿಂದ ಎಲ್ಲರ ಬಾಳು ಹಗುರಾಗುತ್ತದೆ. ನಕ್ಕಾಗ ಮುಖ ಅರಳುತ್ತದೆ. "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ" ಎಂದು ಸರ್ವಜ್ಞ ಹೇಳಿದ್ದಾನೆ. ಅದರಂತೆ ಎಲ್ಲರೂ ಸರಸವಾದ ಮಾತನಾಡಿ ಇತರರನ್ನು ನಗಿಸಿ, ತಾವೂ ನಕ್ಕು ಬಾಳಬೇಕು.

45. *ಪ್ರಶ್ನೆಗಳು :*

ಎ) ಮಾನವನ ಸಹಜವಾದ ಧರ್ಮ ಯಾವುದು ?

ಬಿ) ನಗೆಯ ಎರಡು ಬಗೆಗಳನ್ನು ಹೆಸರಿಸಿ.

ಸಿ) ಯಾರ್‍ಯಾರ ನಗೆಗಳಲ್ಲಿ ಮಾಧುರ್ಯವಿದೆ ?

ಡಿ) ತೆನಾಲಿರಾಮನ ನಗೆ ಎಂತಹದ್ದು ?

ಇ) ಎಲ್ಲರೂ ಹೇಗೆ ಬಾಳಬೇಕು ?

**XIII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5**

46. ಸಂಪರ್ಕ ಮಾಧ್ಯಮಗಳ ಉಪಯೋಗ ಹಾಗೂ ದುಷ್ಪರಿಣಾಮಗಳು.

***ಅಥವಾ***

ಪರಿಸರ ಮಾಲಿನ್ಯದ ತಡೆಗಟ್ಟುವಿಕೆ.

**XIV. ಕೆಳಗಿನ ಯಾವುದಾದರೂ *ಒಂದಕ್ಕೆ* ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

47. ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ನವೀನ' ಎಂದು ಭಾವಿಸಿಕೊಂಡು, ಅಣ್ಣನ ಮದುವೆಯ ಕಾರಣ ನೀಡಿ, ಮೂರು ದಿನಗಳ ರಜೆಯನ್ನು ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಅರ್ಜಿಯನ್ನು ಬರೆಯಿರಿ.

***ಅಥವಾ***

ನಿಮ್ಮನ್ನು ಹಾಸನದ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಯಾದ 'ನವನೀತ' ಎಂದು ಭಾವಿಸಿಕೊಂಡು, ನಿಮ್ಮ ಶೈಕ್ಷಣಿಕ ಪ್ರಗತಿಯ ಬಗ್ಗೆ ವಿವರಿಸುತ್ತ 'ಉಡುಪಿ'ಯಲ್ಲಿರುವ ನಿಮ್ಮ ಗೆಳೆಯನಿಗೆ ಒಂದು ಪತ್ರವನ್ನು ಬರೆಯಿರಿ.